ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರು : ಶ್ರೀ ಬಿ.ಕೆ ಹರಿಪ್ರಸಾದ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 751

ಉತ್ತರಿಸಬೇಕಾದ ದಿನಾಂಕ : 15.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನಂದಿನಿ ಬೂತ್ ಪ್ರಾಂಚೈಗಳನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು;	<u>ನಂದಿನಿ ಬೂತ್/ಪಾರ್ಲರ್:</u> 1. ನಂದಿನಿ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುವ ಸ್ಥಳಗಳಿಗೆ ಬೂತ್ ಅಥವಾ ಪಾರ್ಲರ್ ಗಳೆಂದು ಕರೆಯಲಾಗುವುದು. 2. ಜನಸಂಖ್ಯೆ ಹಾಗೂ ಬೇಡಿಕೆಗೆ ಅನುಗುಣವಾಗಿ ಹಾಲನ್ನು ಪೂರೈಸಲು ಕ್ರಮಕೈಗೊಳ್ಳಲಾಗುತ್ತಿದೆ. 3. ಸ್ಥಳೀಯ ಪ್ರದೇಶದಲ್ಲಿರುವ ನಂದಿನಿ ಹಾಲು ಮತ್ತು ಉತ್ಪನ್ನ ಮಾರಾಟ ಮಾಡಲು ಆಸಕ್ತರನ್ನು ಗುರುತಿಸಲಾಗುವುದು, ಹಾಗೂ ಕೆಲವೊಮ್ಮೆ ನೇರವಾಗಿ ಆಸಕ್ತರು ಅರ್ಜಿಗಳನ್ನು ನೀಡಿದಲ್ಲಿ ಪರಿಶೀಲಿಸಿ ಅಗತ್ಯ ಕ್ರಮವಿಡಲಾಗುತ್ತಿದೆ. 4. ಅರ್ಜಿದಾರರ ಮಾರಾಟ ಕೌಶಲ್ಯತೆ, ಸ್ಥಳೀಯ ಜನಸಾಮಾನ್ಯರೊಂದಿಗೆ ಒಡನಾಟ ಹಾಗೂ ಬಂಡವಾಳವನ್ನು ಭರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ನೇಮಕ ಮಾಡಲಾಗುವುದು. **<u>ನಂದಿನಿ ಪ್ರಾಂಚೈಸಿ:</u>** 1. ಆಸಕ್ತರು ಆಯ್ದಾ ಸ್ಥಳಗಳಲ್ಲಿ ಬಂಡವಾಳ ಹೂಡಿ ಇತರೆ ಉತ್ಪನ್ನಗಳೊಂದಿಗೆ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ಥಳಗಳಿಗೆ ಪ್ರಾಂಚೈಸಿ ಎಂದು ಕರೆಯಲಾಗುತ್ತದೆ. 2. ಸ್ಥಳೀಯ ಪ್ರದೇಶದಲ್ಲಿರುವ ನಂದಿನಿ ಹಾಲು ಮತ್ತು ಉತ್ಪನ್ನ ಮಾರಾಟ ಮಾಡಲು ಆಸಕ್ತರನ್ನು ಪರಿಗಣಿಸಲಾಗುವುದು. 3. ಆಸಕ್ತರ ಮಾರಾಟ ಕೌಶಲ್ಯತೆ, ಸ್ಥಳೀಯ ಜನಸಾಮಾನ್ಯರೊಂದಿಗೆ ಒಡನಾಟ ಹಾಗೂ ಬಂಡವಾಳವನ್ನು ಭರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ನೇಮಕ ಮಾಡಲಾಗುವುದು.

ಆ)	ನಂದಿನಿ ಬೂತ್‌ಗಳಲ್ಲಿ ಟೀ ಮತ್ತು ಕಾಫಿಯನ್ನು ಮಾರಾಟ ಮಾಡಲು ಅವಕಾಶವಿದೆಯೇ;	1) ಪ್ರತ್ಯೇಕ (exclusive) ನಂದಿನಿ ಬೂತ್/ಪಾರ್ಲರ್‌ಗಳಲ್ಲಿ ಯಾವುದೇ ರೀತಿ ಕಾಫಿ ಮತ್ತುಟೀ ಮಾರಾಟ ಮಾಡಲು ಅವಕಾಶವಿರುವುದಿಲ್ಲ 2) ನಂದಿನಿ ಪ್ರಾಂಚೈಸಿಗಳಲ್ಲಿ ಕಾಫಿ ಮತ್ತು ಟೀ ಮಾರಾಟ ಮಾಡಲು ಅವಕಾಶವಿದೆ.
ಇ)	ನಂದಿನಿ ಬೂತ್‌ಗಳನ್ನು ಹಂಚಿಕೆ ಮಾಡಿಕೊಂಡು ಉಪ ಗುತ್ತಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತವರ ವಿರುದ್ಧ ಕೈಗೊಂಡ ಕ್ರಮಗಳೇನು?	ನಂದಿನಿ ಬೂತ್‌ಗಳನ್ನು ಉಪ ಗುತ್ತಿಗೆ ನೀಡಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಕಡತ ಸಂಖ್ಯೆ: ಸಿಒ 103 ಪಿಎಂಸಿ 2020

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು